# ಸಂಘಜೀವಿ ಜಿಂಕೆ

ಜಿಂಕೆಗಳು ಸಂಘಜೀವಿ. ಆದರೆ ಕಾಡುಪ್ರಾಣಿಗಳ ಆಹಾರಕ್ಕೆಂದೇ ಈ ಜಿಂಕೆಗಳು ಸೃಷ್ಟಿಯಾಗಿರುವುದು ಜೀವಸರಪಳಿಯ ವಿಪರ್ಯಾಸ.

■ ಚಿತ್ರ– ಲೇಖನ: **ಆರ್.ಕೆ.ಮಧು**





ಸಹಜ ಸುಂದರ ಸೌಮ್ಯ ಹಾವಭಾವಗಳ ಜಿಂಕೆ ಮುಗ್ಧ ಮತ್ತು ಅಷ್ಟೇ ನಿರಪಾಯಕಾರಿ ಪ್ರಾಣಿ. ಯಾರೊಬ್ಬರಿಗೂ ಕೇಡುಮಾಡದ ಈ ಜೀವಿ ಸಾಧುವಾದರೂ ತನ್ನ ಜೀವನದ ಸಾರ್ಥಕತೆಯನ್ನು ತನ್ನ ಸಾವಿನಲ್ಲೇ ಕಾಣುವುದು ವಿಪರ್ಯಾಸ. ಈ ಪ್ರಾಣಿ ತನ್ನ ಬದುಕನ್ನು ಕಾಡಿನ ಇನ್ನೊಂದು ಜೀವಿಯ ಉಳಿವಿಗಾಗಿ ಸಮರ್ಪಿಸುವುದು, ಆ ಮೂಲಕ ಧನ್ಯತೆ ಪಡೆಯುವುದು ಜೀವಜಾಲದ ಸೋಜಿಗವೇ ಸರಿ.

**Axis axis** ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲ್ಪಡುವ ಈ ಜಿಂಕೆಯನ್ನು ಆಂಗ್ಲ ಭಾಷೆಯಲ್ಲಿ 'ಸ್ಪಾಟೆಡ್ ಡೀರ್' ಎಂದು ಹೆಸರಿಸಲಾಗಿದೆ. ಹಿಂದಿಯಲ್ಲಿ 'ಚಿತಾಲ್' ಎಂದೂ ಕರೆಯುತ್ತಾರೆ. ಭಾರತವಲ್ಲದೇ ಇಂಡೋನೇಷ್ಯಾ, ಶ್ರೀಲಂಕಾ, ನೇಪಾಳ, ಭೂತಾನ್ ಮುಂತಾದ ದೇಶಗಳಲ್ಲಿ ಇವು ಕಾಣಸಿಗುತ್ತವೆ. ಅಮೆರಿಕಾ, ಆರ್ಜೆಂಟೈನಾ, ಆಸ್ಟ್ರಿಯಾ, ಬ್ರೆಜಿಲ್, ಕ್ರೊವೇಷಿಯಾ ಮುಂತಾದ ದೇಶಗಳಿಗೂ ಪರಿಚಿತವಾಗಿದೆ.

ಇವುಗಳ ಬಗ್ಗೆ ಮೊದಲಿಗೆ 1777ರಲ್ಲಿ ವಿವರಗಳನ್ನು ದಾಖಲಿಸಿದಾತ ಜರ್ಮನಿಯ ಪ್ರಕೃತಿ ಪ್ರೇಮಿ ಜೊನಾಥನ್ ಕ್ರಿಸ್ಟಿಯನ್. ಹುಲ್ಲುಗಾವಲು, ಕುರುಚಲು ಕಾಡು, ಮಳೆಕಾಡು ಮುಂತಾದೆಡೆ ಇವು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿವೆ. ಒಟ್ಟು ಸಂಖ್ಯೆ ನಿಖರವಾಗಿ ತಿಳಿದಿಲ್ಲವಾದರೂ ಸಾಕಷ್ಟು ಸಂಖ್ಯೆಯಲ್ಲಿವೆ ಎಂದು ಹೇಳಬಹುದು. ಆಹಾರಕ್ಕಾಗಿ ಮತ್ತು ಮೋಜಿಗಾಗಿ ಇದರ ಕಳ್ಳ ಬೇಟೆ ಅವ್ಯಾಹತವಾಗಿ ನಡೆಯುತ್ತಿರುವುದರಿಂದ ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ ಎಂಬ ಆತಂಕವೂ ಇದೆ.

ಜಿಂಕೆಗಳು ಸಂಘ ಜೀವಿ. ಕೆಲವೊಮ್ಮೆ ಇವುಗಳ ಗುಂಪು 100ರ ಆಸುಪಾಸು ಇರುತ್ತವೆ. ಗಂಡು ಸುಮಾರು 85 ಕೆ.ಜಿ ತೂಕ ಹೊಂದಿದ್ದು, ಆಕರ್ಷಕ ಕೊಂಬುಗಳನ್ನು ಹೊಂದಿರುತ್ತದೆ. ಇದರ ಕೊಂಬಿನಲ್ಲಿ 3 ಕವಲುಗಳಿರುತ್ತವೆ. ಸುಮಾರು ಒಂದು ಮೀಟರ್ ಎತ್ತರವಿರುತ್ತದೆ. ಪ್ರಾರಂಭದಲ್ಲಿ ಸಣ್ಣ ಕೂದಲುಗಳನ್ನು ಹೊಂದಿದ್ದು ಹೊಳೆಯುತ್ತದೆ. ನಂತರ ಆ ಕೂದಲುಗಳು